ಹುಟ್ಟಿಸಿತ್ತು. ಎಲ್ಲಿ ತಾನೂ ತೇಲಿ ಹೋಗುತ್ತೇನೋ ಎಂದು. ಅಬ್ಬಾ ಮನಸ್ಸೇ, ನಿನ್ನ ಓಲಾಟವೂ ಸಾಕು, ನೀನು ಹುಟ್ಟಿಸುವ ಉನ್ಮತ್ತ ಭಾವವೂ ಸಾಕು. ಯೋಚಿಸುತ್ತಾ ನಿದ್ದೆ ಮಾಡುವ ಪ್ರಯತ್ನ ಮಾಡಿದಳು. ಶಂಕರ ತೋರುವ ಪ್ರೀತಿಯಲ್ಲಿ ಸ್ವಲ್ಪವೂ ಕುಂದಿಲ್ಲ. ತಾನೂ ಅಷ್ಟೇ ತೀವ್ರವಾಗಿ ಶಂಕರನನ್ನು, ಸಂಸಾರವನ್ನು ಮೋಹಿಸುವವಳು. ಅಷ್ಟಿದ್ದೂ ಹೀಗ್ಯಾಕೆ ಆಗುತ್ತಪ್ಪಾ! ಮನಸ್ಸಿನ ಚಂಚಲತೆಯೇ ಇದು. ಕೇತಕಿಗೆ ತನ್ನ ಮನಸ್ಸನ್ನು ಅಷ್ಟು ಲಘುವಾಗಿ ನೋಡಲೂ ಇಷ್ಟವಾಗಲಿಲ್ಲ. ತನ್ನನ್ನು ಮೆಚ್ಚುವವರು ತುಂಬಾ ಜನರಿದ್ದಾರೆ. ಆದರೆ ತಾನೂ ಮೆಚ್ಚುವವರು ತನ್ನನ್ನು ಅಷ್ಟೇ ತೀವ್ರವಾಗಿ ಮೆಚ್ಚುಗೆ ತೋರಿದಾಗ ಆಗುವ ರಗಳೆಯೇ ಇದು! ಶಂಕರನಿಗೂ ಹೀಗಾಗಿರಬಹುದೇ! ಅವ್ನ ಸುತ್ತಲೂ ಆಫೀಸಿನ ಬೇಕಾದಷ್ಟು ಲಲನೆಯರು. ಅವನ ಗುಣಕ್ಕೆ, ಸ್ವಭಾವಕ್ಕೆ ಮನ ಸೋಲದವರು ಇದ್ದಾರೆಯೇ. ಯೋಚಿಸುತ್ತಾ ಬೆಳಗನ್ನು ನೋಡಿದಳು. ಕೇತಕಿ ಬೆಳಗಿನ ಬ್ರೇಕ್‌ಫಾಸ್ಟ್ ರೂಮಿಗೆ ತರಿಸಿಕೊಂಡಳು. ರಿಸೆಪ್ಷನಿಸ್ಟ್‌ಗೆ ಹೇಳಿ ಏರ್‌ಪೋರ್ಟ್‌ಗೆ ಕ್ಯಾಬ್ ಬುಕ್ ಮಾಡಿಸಿ ಕೆಳಗೆ ಬಂದಳು. ರಿಸೆಪ್ಷನ್ ಪಕ್ಕದ ಡೈನಿಂಗ್ ಹಾಲಿನಲ್ಲಿ ಕೂತು ಮಾತಾಡುತ್ತಿದ್ದ ಬೇಡೆಕರ್ ಮತ್ತು ಜೋಶಿಯನ್ನು ಕನ್ನಡಿಯಿಂದ ಗಮನಿಸಿದಳು. ಕೇತಕಿ ಹೋಗಿ ಇಬ್ಬರನ್ನೂ ವಂದಿಸಿ ಹೊರಡುತ್ತೇನೆ ಎಂದಾಗ ಮುಕುಂದ್ ಜೋಶಿಯ ಕಣ್ಣುಗಳಲ್ಲಿ ಕಂಡ ನಿರಾಸೆ, ಕೇತಕಿಯನ್ನು ಮತ್ತೂ ಕುಗ್ಗಿಸಿತು. ಸಾವರಿಸಿಕೊಂಡು 'ತುಂಬಾ ಖುಷಿ ಆಯ್ತು, ನಿಮ್ಮಂತಹ ವ್ಯಕ್ತಿಯನ್ನು ಮೀಟ್ ಮಾಡಿ. ನೋಡೋಣ ಅವಕಾಶವಾದ್ರೆ ಪುಣೆ ಸೆಮಿನಾರಿಗೆ ಬರ್ತೀನಿ' ಎಂದು ಕೈ ಮುಗಿದಳು. 'ಯೆಸ್ ಯೆಸ್, ಬರಲೇಬೇಕು. ಐ ವಿಲ್ ಕೀಪ್ ಇನ್ ಟಚ್ ವಿದ್ ಯು' ಕಣ್ಣಿನಲ್ಲಿ ನೂರು ನಕ್ಷತ್ರಗಳನ್ನು ತುಂಬಿ ಅಂದ ಜೋಶಿ. ಕೇತಕಿ ಹೊರಟಳು, ಹಿಂದೆ ತಿರುಗಿ ನೋಡುವ ಧೈರ್ಯ ಮಾಡದೇ.

ವಿಮಾನವೇರಿ ಕೂತಾಗ ಎಂಥದೋ ಸಂಕಟ. ಹೇ ಭಗವಂತ, ಮನುಷ್ಯನಿಗ್ಯಾಕೆ ಅನುರಕ್ತಿಗೆ ಒಲಿಯುವ ದೌರ್ಬಲ್ಯ ಕೊಟ್ಟೆ. ಅಂಥ ಚಿಗುರುಗಳಿಗೆ ವೃಕ್ಷವಾಗುವ ಅವಕಾಶವೇ ಇಲ್ಲದಿರುವಾಗ ಮತ್ತೆ ಕೊನರುವ ತೇವವೇಕೋ! ಮೊಬೈಲಿನ ಬೀಪ್ ಸದ್ದಿಗೆ ಕೈಗೆತ್ತಿಕೊಂಡಳು. ಮುಕುಂದ್ ಜೋಶಿಯ ಮೆಸೇಜ್. 'ಇಟ್ ವಾಸ್ ವಂಡರ್‌ಫುಲ್ ಮಿಟೀಂಗ್ ಯು ಕೇತಕಿ. ಯು ಆರ್ ಸೋ ರೇಡಿಯೆಂಟ್! ಹೋಪ್ ಟು ಸಿ ಯು ಸೂನ್' ಮತ್ತೆ ಅನುರಾಗದ ಅಲೆಗಳು... ಕಣ್ಣು ಮುಚ್ಚಿ ಕೂತಳು. ಕ್ಯಾಬ್ ಹತ್ತಿ ಕೂತಾಗ ಮುಕುಂದ್ ಜೋಶಿಯ ನಂಬರ್ ಡಿಲೀಟ್ ಮಾಡಬೇಕೆಂದುಕೊಂಡಿದ್ದಳು. ಮೆಸೇಜು ನೋಡುತ್ತಿದ್ದಂತೇ ಮತ್ತೆ ಮಳೆಯ ಸಿಂಚನದ ಅನುಭವ. ಮಳೆಯ ಸುಖಕ್ಕೆ ಒಡ್ಡಿಕೊಳ್ಳುವುದು ಪ್ರಕೃತಿ ಸಹಜವೆನಿಸಿತು. ಮನದಲ್ಲೆದ್ದ ಅನುರಾಗದ ಮೊಳಕೆಗೆ ಕೊನೆ ಪಕ್ಷ ಸ್ನೇಹದ ನೀರನ್ನಾದರೂ ಎರೆಯಬಹುದಲ್ಲ ಎನಿಸಿ ಕೇತಕಿ, 'ಮೈ ಪ್ಲೆಜರ್, ಥಾಂಕ್ಯೂ. ಸಿ ಯು ಸೂನ್' ಟೈಪಿಸಿ ಕಳಿಸಿದಾಗ, ನಿರಾಳತೆಯ ಭಾವ. ಹೊರ ನೋಡಿದಳು. ಹತ್ತಿಯಂತೆ ಹಗುರ ಬಿಳಿ ಬಿಳಿ ಮೋಡಗಳ ರಾಶಿ.

## ದೀಪಾ ಫಡ್ಕೆ

ಹರಿದಾಸ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿ ಪಡೆದಿರುವ ದೀಪಾ ಅವರ 'ಋತ', 'ಹರಪನಹಳ್ಳಿ ಭೀಮವ್ವ' ಮತ್ತು ಐದು ವ್ಯಕ್ತಿ ಚಿತ್ರಣಗಳ ಪುಸ್ತಕಗಳು ಸೇರಿ ಒಟ್ಟು 7 ಕೃತಿಗಳು ಪ್ರಕಟವಾಗಿವೆ. ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.